KARNATAK UNIVERSITY, DHARWAD
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
Examination G.A.D. Section
ಪರೀಕ್ಷಾ ಸಾಮಾನ್ಯ ಆಡಳಿತ ವಿಭಾಗ
"NAAC Accredited with "A" Grade 2022"

Pavate Nagar, Dharwad
ಪಾವಟೆನಗರ, ಧಾರವಾಡ

Tel Ph No. 0836-2215267
Website : www.kud.ac.in

ನಂ:/ಕವಿವಿ/ಪರೀಕ್ಷಾ/ಜಿಎಡಿ/2026/ 842

ದಿನಾಂಕ: 13/01/2026

## ಸುತ್ತೋಲೆ

**ವಿಷಯ:** ಸ್ನಾತಕ NEP ಪದವಿಯ 3 ನೇ ಸೆಮಿಸ್ಟರ್‌ನ ದಿನಾಂಕ:12/01/2026 ರಂದು ಜರುಗಿದ OEC ವಿಷಯದ ಪರೀಕ್ಷೆಗೆ ಹಾಜರಾಗದೆ ಇರುವ ವಿದ್ಯಾರ್ಥಿಗಳ ಮಾಹಿತಿಯನ್ನು ಒದಗಿಸುವ ಕುರಿತು.

**ಉಲ್ಲೇಖ:** ವಿಶ್ವವಿದ್ಯಾಲಯದ ಪರೀಕ್ಷಾ ಪರಿಷ್ಕೃತ ವೇಳಾಪಟ್ಟಿ ನಂ.ಕವಿವಿ/ಪರೀಕ್ಷಾ/ಜಿಎಡಿ/2025/781, ದಿನಾಂಕ:30/12/2025.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಕವಿವಿ ವ್ಯಾಪ್ತಿಯ ಎಲ್ಲ ಘಟಕ ಹಾಗೂ ಸಲಂಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, NEP ಅಡಿಯಲ್ಲಿ ಬರುವ ಎಲ್ಲ ಸ್ನಾತಕ ಪದವಿಗಳ ಲಿಖಿತ ಪರೀಕ್ಷೆಗಳನ್ನು ದಿನಾಂಕ:05/01/2026 ರಿಂದ ಜರುಗಿಸಲು ಉಲ್ಲೇಖಿತ ಪರಿಷ್ಕೃತ ವೇಳಾಪಟ್ಟಿಯನ್ನು ಪ್ರಕಟಿಸಲಾಗಿತ್ತು. ಸದರ ಪರಿಷ್ಕೃತ ವೇಳಾಪಟ್ಟಿಯನ್ವಯ NEP ಎಲ್ಲ ಸ್ನಾತಕ ಪದವಿಯ 3 ನೇ ಸೆಮಿಸ್ಟರ್‌ನ ರಿಪೀಟರ ವಿದ್ಯಾರ್ಥಿಗಳಿಗೆ OEC ವಿಷಯದ ಪರೀಕ್ಷೆಯನ್ನು ದಿನಾಂಕ:12/01/2026 ರಂದು ಬೆಳಿಗ್ಗೆ 9 ರಿಂದ 11 ಗಂಟೆಯವರೆಗೆ ನಿಗದಿಪಡಿಸಲಾಗಿತ್ತು. ಆದರೆ ವಿದ್ಯಾರ್ಥಿಗಳು ಯು.ಯು.ಸಿ.ಎಂ.ಎಸ್. ತಂತ್ರಾಂಶದ ಮೂಲಕ ಪಡೆದುಕೊಂಡ ಹಾಲ ಟಿಕೇಟ್‌ನಲ್ಲಿ ಸದರಿ OEC ವಿಷಯದ ಪರೀಕ್ಷಾ ವೇಳೆಯು ಮಧ್ಯಾಹ್ನ 2 ಗಂಟೆಯಿಂದ 4 ಗಂಟೆಯವರೆಗೆ ಎಂದು ಇದ್ದಿದ್ದರಿಂದ ಬೆಳಿಗ್ಗೆ ಪರೀಕ್ಷೆಗೆ ಹಾಜರಾಗುವ ಬದಲು ಮಧ್ಯಾಹ್ನ 2 ಗಂಟೆಗೆ ಪರೀಕ್ಷಾ ಕೇಂದ್ರಕ್ಕೆ ಬಂದಿರುವ ಕಾರಣ ಪರೀಕ್ಷೆ ಬರೆಯಲು ಸಾಧ್ಯವಾಗಿರುವುದಿಲ್ಲವೆಂದು ಕೆಲವು ವಿದ್ಯಾರ್ಥಿಗಳು ಹಾಗೂ ಮಹಾವಿದ್ಯಾಲಯಗಳ ಪ್ರಾಚಾರ್ಯರು ದೂರವಾಣಿ ಮೂಲಕ ಹಾಗೂ ಪತ್ರಗಳ ಮೂಲಕ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗದ ಗಮನಕ್ಕೆ ತಂದಿರುತ್ತಾರೆ.

ಆದುದರಿಂದ ದಿನಾಂಕ:12/01/2026 ರಂದು ಬೆಳಿಗ್ಗೆ 9 ಗಂಟೆಗೆ ಜರುಗಿದ NEP ಎಲ್ಲ ಸ್ನಾತಕ ಪದವಿಯ 3 ನೇ ಸೆಮಿಸ್ಟರ್‌ನ OEC ವಿಷಯದ ಪರೀಕ್ಷೆಗೆ ಕೆಲವು ವಿದ್ಯಾರ್ಥಿಗಳ ಪರೀಕ್ಷಾ ಪ್ರವೇಶ ಪತ್ರದಲ್ಲಿ ತಾಂತ್ರಿಕ ಕಾರಣಗಳಿಂದಾಗಿ ಸಮಯದ ಬಗ್ಗೆ ಸರಿಯಾಗಿ ಮಾಹಿತಿ ದೊರೆಯದೆ ಪರೀಕ್ಷೆಗೆ ಗೈರು ಹಾಜರಾದದ್ದು ಗಮನಕ್ಕೆ ಬಂದಿದೆ ಅಂತಹ ವಿದ್ಯಾರ್ಥಿಗಳ ವಿಷಯವಾರು ಮಾಹಿತಿಯನ್ನು ಪ್ರಾಚಾರ್ಯರು ಈ ಸುತ್ತೋಲೆಯೊಂದಿಗೆ ಲಗತ್ತಿಸಿದ ನಮೂನೆಯಲ್ಲಿ ಭರ್ತಿ ಮಾಡಿ ದಾಖಲೆಗಳೊಂದಿಗೆ ದಿನಾಂಕ:13/01/2026 ರ ಸಾಯಂಕಾಲ 5.00 ಗಂಟೆಯೊಳಗಾಗಿ ಪರೀಕ್ಷಾ ವಿಭಾಗದ ಜಿ.ಎ.ಡಿ. ಶಾಖೆಗೆ ಸಾಫ್ಟ್ ಕಾಪಿಯನ್ನು ಇ-ಮೇಲ್ ವಿಳಾಸಕ್ಕೆ examgad@kud.ac.in ಸಲ್ಲಿಸಲು ಸೂಚಿಸಲಾಗಿದೆ.

13/1/2026

ಕುಲಸಚಿವರು(ಮೌಲ್ಯಮಾಪನ)

ಗೆ,

ಕರ್ನಾಟಕ ವಿಶ್ವವಿದ್ಯಾಲಯ ವ್ಯಾಪ್ತಿಯ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ.

**ಪ್ರತಿ ಮಾಹಿತಿಗಾಗಿ:**

1. ಸಿಸ್ಟಮ್ ಎನಾಲಿಸ್ಟ್, ಗಣಕಯಂತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2. ನಿರ್ದೇಶಕರು ಮಾಹಿತಿ ತಂತ್ರಜ್ಞಾನ ವಿಭಾಗ ಕ.ವಿ.ವಿ. ಧಾರವಾಡ.
   (ಸುತ್ತೋಲೆಯನ್ನು ಅಂತರ್ಜಾಲದಲ್ಲಿ ಪ್ರಕಟಿಸುವುದು)
3. ಕುಲಸಚಿವರು(ಮೌಲ್ಯಮಾಪನ), ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ ಧಾರವಾಡ.
4. ಉಪಕುಲಸಚಿವರು / ಸಹಾಯಕ ಕುಲಸಚಿವರು, ಪರೀಕ್ಷಾ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
5. ಎಲ್ಲ ಅಧೀಕ್ಷಕರುಗಳಿಗೆ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.

# ನಮೂನೆ

NEP ಎಲ್ಲ ಸ್ನಾತಕ ಪದವಿಯ 3 ನೇ ಸೆಮಿಸ್ಟರ್‌ನ OEC ವಿಷಯದ ಪರೀಕ್ಷೆಗೆ ಹಾಜರಾಗದೆ ಇರುವ ರಿಪೀಟರ ವಿದ್ಯಾರ್ಥಿಗಳ ಮಾಹಿತಿ

| Sl.NO | Student Name | Seat No | Course/Semester | Subject | Subject Code |
|---|---|---|---|---|---|
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ | |

ಪ್ರಾಚಾರ್ಯರ ಸಹಿ ಹಾಗೂ ಮೊಹರು